ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕ **07.11.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ- ಪ್ರತಿವಾದಿ 2 ರಿಂದ 4 ರವರುಗಳ ಪರ ವಕೀಲರಾದ ಶ್ರೀ ಕೆ.ಪಿ.ಬಿ ರವರಿಂದಃ-</u>**

ದಿನಾಂಕ **21.04.1999** ರ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ **22** ಎಂದು ಗುರುತಿಸಲಾಯಿತು. ಸದರಿ ದಾಖಲೆಯ ಎಲ್ಲಾ ಪುಟಗಳಲ್ಲಿರುವ ಮಾರಾಟಗಾರರ ಸಹಿಗಳನ್ನು ಹಾಗೂ ಪುಟ ಸಂಖ್ಯೆ **5** ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಪುಟ ಸಂಖ್ಯೆ **5** ರಲ್ಲಿರುವ ವಿಕ್ರಯದಾರರು ಮತ್ತು ಕ್ರಯದಾರರ ಸಹಿಗಳನ್ನು ನಿ.ಡಿ **22** (ಎ) ಯಿಂದ (ಸಿ) ಎಂದು ಗುರುತಿಸಲಾಯಿತು. ಸಾಕ್ಷಿಗಳ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಡಿ **22** (ಡಿ) ಮತ್ತು (ಇ) ಎಂದು ಗುರುತಿಸಲಾಯಿತು. ಮೂರು ಪಹಣಿ ಪತ್ರಿಕೆಗಳನ್ನು ಹಾಗೂ ಎರಡು ಕಂದಾಯ ರಶೀದಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಡಿ **23** ರಿಂದ **27** ಎಂದು ಗುರುತಿಸಲಾಯಿತು.

ವಾದಿಗಳ ಪರ ವಕೀಲರು ಹಾಜರಿದ್ದು, ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.